ಚಿನ್ನ ಬೆಳ್ಳಿ ಮಾರಾಟಗಾರರಾಗಿದ್ದ, ಡಿ. ಮುರಳೀಧರ್ ಕುಮಾರ್. ಸಾಹಿತ್ಯ ಮತ್ತು ಸಾಹಿತ್ಯೇತರ ವಿಷಯಗಳಲ್ಲಿ ಅಪಾರ ಓದು ಮತ್ತು ವಿಶ್ಲೇಷಣೆ ಹೊಂದಿರುವ ಮುರಳಿ ಅದೆಷ್ಟೋ ವಸ್ತುವನ್ನು ಕುರಿತು ಅಥೆಂಟಿಕ್ ಆಗಿ ಮಾತನಾಡಬಲ್ಲವರು. ಬೆಂಗಳೂರಿಗೆ ಬಂದ ಹೊಸತರಲ್ಲಿ(1985) ನನ್ನ ರೂಂಮೆಟ್ ಆಗಿದ್ದರು. ಕೊಂಚ ವಿಲಕ್ಷಣ. ಆದರೆ, ಆಳವಾದ ವಿದ್ವತ್ತು. ನನ್ನ ಬಹುಮುಖ್ಯ ಕಥೆಯಾದ 'ಸ್ಖಲನ' ಬರೆಯಲು ಅವರೇ ಕಾರಣ. 'ಮೌನಗಳೇ ಮಾತನಾಡಿ', 'ಅನ್ನದಾತೋ ಸುಖೀಭವ', 'ಮೇ–3', 'ಹೂವಿನಂಗಡಿಯ ಮದುಮಗ' ಮುಂತಾದ ಕಥೆಗಳ ವಸ್ತು, ತಂತ್ರಗಳ ಬಗ್ಗೆ ಅವರೊಟ್ಟಿಗೆ ಚರ್ಚಿಸುತ್ತಿದ್ದೆ. ನಾನ್ ಅಕೆಡೆಮಿಕ್ ಪರಿಸರದಲ್ಲೇ ಬೆಳೆದ ನನಗೆ ಕಥೆಗಳ ಬಗ್ಗೆ ಚರ್ಚಿಸಲು ದೊರಕುತ್ತಿದ್ದ ಮಿತ್ರದ್ವಯರೆಂದರೆ ಜೆ.ಬಿ. ರಂಗಸ್ವಾಮಿ ಮತ್ತು ಮುರಳೀಧರ್. ಕಾವ್ಯಮೀಮಾಂಸೆ, ಕನ್ನಡ ಸಾಹಿತ್ಯ ಚರಿತ್ರೆ, ಪಾಶ್ಚಾತ್ಯ ವಿಮರ್ಶೆ ಇತ್ಯಾದಿಗಳನ್ನು ನಾನು ಕನ್ನಡ ಎಂ.ಎ. ತರಗತಿಗಳಿಂದ ಗ್ರಹಿಸಿರಬಹುದಾದರೂ ನನ್ನ ಸೃಜನಶೀಲ ಯಾತ್ರೆಗೆ ನೆರವಾಗಿದ್ದು ಹೊರಗಿನ ವಸ್ತು–ವ್ಯಕ್ತಿಗಳೇ. 'ಸ್ಖಲನ' ಕಥೆಯು ತೆಲುಗಿನ ವಿಪುಲ ಪತ್ರಿಕೆಯ ನೂರನೇ ಸಂಚಿಕೆಯ ನಿಮಿತ್ತ ಇರಿಸಿದ್ದ ಅಂತರರಾಷ್ಟ್ರೀಯ ಸಣ್ಣ ಕಥಾ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆಯಿತು. ತೆಲುಗಿನಿಂದಲೂ ಅಭಿಮಾನಿ ಓದುಗರ ಕೆಲವು ಪತ್ರಗಳು ಬಂದವು. ಸಾಹಿತ್ಯದಲ್ಲಿ ಅದರಲ್ಲೂ ನನಗೆ ಸಣ್ಣಕಥೆಗಳು ತಂದುಕೊಟ್ಟ ಕೀರ್ತಿಯ ಜತೆ ಹೋಲಿಸಿದಾಗ ಚಲನಚಿತ್ರ ಮಾಧ್ಯಮ ಕೊಟ್ಟ ಎಲ್ಲ ಮನ್ನಣೆಗಳೂ ಎರಡನೆ ಸ್ಥಾನವನ್ನು ಅಲಂಕರಿಸುತ್ತವೆ ಎನ್ನಬಹುದು.

**'ಈಗ ಏಕೆ ಮೊದಲಿನಂತೆ ಕಥೆಗಳನ್ನು ಬರೆಯುತ್ತಿಲ್ಲ?' ಉತ್ತರ ಸುಲಭ. ಅಂಕಣಗಳನ್ನು, ಪ್ರವಾಸಿ ಬರವಣಿಗೆಯನ್ನು, ಚಿತ್ರ ನಿರ್ದೇಶನವನ್ನು ತೊರೆದುಬಿಟ್ಟರೆ ನನ್ನೊಳಗಿನ ಕಥೆಗಾರ ಮರುಹುಟ್ಟು ಪಡೆಯಬಲ್ಲ. ಒಂದು ಸಿನಿಮಾ ಚಿತ್ರಕಥೆಯನ್ನು ರಚಿಸುವಾಗ, ಪ್ರತಿದೃಶ್ಯ ಕಟ್ಟುವಾಗ ಸಣ್ಣ ಕಥೆಯೊಂದನ್ನು ರಚಿಸಿದಷ್ಟೇ ಸವಾಲಾಗಿರುತ್ತದೆ. ಕಥೆ ಬರೆಯದೆ ಇರುವುದಕ್ಕೆ ಇದು ನೆಪವಲ್ಲ. ನನ್ನೊಳಗಿನ ಕಥೆಗಾರ ರೂಪಾಂತರಗೊಂಡಿದ್ದಾನೆ.**

ಒಂದು ದಿನ ಜಿ.ಎನ್. ರಂಗನಾಥರಾವ್ ಅವರು ಪತ್ರಿಕಾಲಯಕ್ಕೆ ಕರೆಸಿಕೊಂಡು ಲಾಯರ್ ನೋಟಿಸ್ ತೋರಿಸಿದರು. 'ಭೂಮಿ ಗುಂಡಗಿದೆ' ಎಂಬ ಕಥೆ 'ಮಯೂರ'ದಲ್ಲಿ (ಅಕ್ಟೋಬರ್, 1991) ಅಚ್ಚಾಗಿತ್ತು. ಅದು ಜಾತಿನಿಂದನೆ ಎಂದು ಗೌರಿಬಿದನೂರಿನಿಂದ ವಕೀಲರೊಬ್ಬರು ಮಾನನಷ್ಟ ಮೊಕದ್ದಮೆಗೆ ಪೂರ್ವಭಾವಿಯಾಗಿ ನೋಟಿಸ್ ನೀಡಿದ್ದರು. 'ನೀವು ಒಳ್ಳೆಯ ಕಥೆಗಾರ. ಸ್ವಲ್ಪ ಎಚ್ಚರವಹಿಸಿ ಬರೆದರೆ ಒಳ್ಳೆಯದು. ಇದೆಲ್ಲವನ್ನೂ ನಮ್ಮ ಕಚೇರಿ ನೋಡಿಕೊಳ್ಳುತ್ತದೆ. ನಿರಾತಂಕವಾಗಿರಿ' ಎಂದರು. ಇಷ್ಟು ದಿನಗಳ ಬರವಣಿಗೆಯ ಯಾತ್ರೆಯಲ್ಲಿ ಇದು ಏಕಮಾತ್ರ ಘಟನೆ. ಜಾತಿಸೂಕ್ಷ್ಮಗಳಿರುವ ಭಾರತದಲ್ಲಿ ಸಹಜವಾದ